ಚನ್ನಪಟ್ಟಣದಲ್ಲಿ ಹಾಪ್‌ಕಾಮ್ಸ್‌ನ ಮಾರಾಟ ಮಳಿಗೆ

256 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಚನ್ನಪಟ್ಟಣ ಟೌನ್‌ನಲ್ಲಿ ಇನ್ನು ಮೂರು "ಹಾಪ್‌ಕಾಮ್ಸ್"ನ ಮಾರಾಟ ಮಳಿಗೆ (ಹಣ್ಣು ಮತ್ತು ತರಕಾರಿಗಳ ಮಾರಾಟ ಮಳಿಗೆ)ಗಳನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದಲ್ಲಿ ಬಾಕಿ ಇರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು.

(ಇ) ಇವುಗಳನ್ನು ಯಾವಾಗ ತೆರೆಯಲಾಗುವುದು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

(ಅ) ಹೌದು.

(ಆ) ಚನ್ನಪಟ್ಟಣ ಟೌನ್‌ನಲ್ಲಿ "ಹಾಪ್‌ಕಾಮ್ಸ್" ವತಿಯಿಂದ ಈಗಾಗಲೇ 2 ಮಾರಾಟ ಮಳಿಗೆಗಳನ್ನು ತೆರೆಯಲಾಗಿದೆ.

	ವಿವರ	ಸಂಖ್ಯೆ
ಅ.	ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಆವರಣದಲ್ಲಿ	1
ಆ.	ಚನ್ನಪಟ್ಟಣ ಪಶುವೈದ್ಯ ಶಾಲೆಯ ಮುಂಭಾಗದಲ್ಲಿ	1

ಇನ್ನೂ ಒಂದು ಮಾರಾಟ ಮಳಿಗೆಯನ್ನು 6ನೇ ಕ್ರಾಸ್ ಪ್ರಿಂಟಿಂಗ್ ಮಿಲ್‌ನ ಬಳಿ ಗುರುತಿಸಲಾಗಿದ್ದು, ಸ್ಥಳ ಒದಗಿಸಲು ಪುರ ಸಭೆಯನ್ನು ಸಂಪರ್ಕಿಸಲಾಗಿದೆ. ಈ ಸ್ಥಳವು ಹಾಪ್‌ಕಾಮ್ಸ್ ಸಂಘಕ್ಕೆ ದೊರೆತ ಕೂಡಲೇ ಮಾರಾಟ ಮಳಿಗೆಯನ್ನು ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(ಇ) ಪುರಸಭೆಯಿಂದ ಸ್ಥಳ ಮಂಜೂರಾದ ನಂತರ ಮೂರು ತಿಂಗಳ ಒಳಗಾಗಿ ಮಳಿಗೆಗಳನ್ನು ನಿರ್ಮಿಸಿ ಉದ್ಘಾಟಿಸಲಾಗುವುದು.

ಡಿ.ಸಿ.ಸಿ. ಬ್ಯಾಂಕಿನಲ್ಲಿರುವ ಎಲ್ಲಾ ದರ್ಜೆಯ ನೌಕರರ ಸಂಖ್ಯೆ

241 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಚಿಕ್ಕಮಗಳೂರು ಡಿ.ಸಿ.ಸಿ. ಬ್ಯಾಂಕಿನಲ್ಲಿರುವ ಒಟ್ಟು ಸಿಬ್ಬಂದಿಗಳೆಷ್ಟು?

(ಆ) ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸಿಬ್ಬಂದಿಗಳೆಷ್ಟು?

(ಇ) ಸಿಬ್ಬಂದಿ ನೇಮಕ ಮಾಡುವಾಗ ಹಾಗೂ ಬಡ್ತಿ ನೀಡುವಾಗ ಮೊದಲಿನಿಂದ ಇಲ್ಲಿಯ ತನಕ ರೋಸ್ಟರ್ ಪದ್ಧತಿಯನ್ನು ಅನುಸರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಈ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

(ಅ) 117 ಮಂದಿ

(ಆ) ಪರಿಶಿಷ್ಟ ಜಾತಿ - 12

ಪರಿಶಿಷ್ಟ ವರ್ಗ - 03

(ಇ) ಹೌದು

(ಈ) ಸಿಬ್ಬಂದಿ ನೇಮಕ ಮಾಡುವಾಗ ಮತ್ತು ಬಡ್ತಿ ನೀಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸುವ ಬಗ್ಗೆ ಬ್ಯಾಂಕಿಗೆ ನಿರ್ದೇಶನ ನೀಡಲಾಗಿದೆ.